**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 56 ಪ್ರಾ.ಸಾ. : 24**

ಸಾಕ್ಷಿಯ ಹೆಸರು : ಖನ್ನಾ ಮಾರಿಯಾ ಗೊಂಡ.
ತಂದೆಯ ಹೆಸರು : ಮಾರಿಯಾ ಗೊಂಡ.
ವಯಸ್ಸು : 60 ವರ್ಷ
ಉದ್ಯೋಗ : ರೈತಾಪಿ.
ವಾಸ : ಹಳ್ಳಿಬೈಲು, ಸಿದ್ದಾಪುರ.

**ದಿನಾಂಕಃ 07-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಹಳ್ಳಿಬೈಲು ಗ್ರಾಮದಲ್ಲಿ ಸಿದ್ದಾಪುರ ತಾಲೂಕಿನಲ್ಲಿ ವಾಸ ಇದ್ದೇನೆ. ಹಳ್ಳಿಬೈಲು ಗ್ರಾಮ ಖಾನಗೋಡು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುತ್ತದೆ. ನಾನು ಹುಟ್ಟಿದಾಗಿನಿಂದ ಅಲ್ಲಿಯೇ ವಾಸವಿದ್ದೇನೆ. ನನಗೆ ಆರೋಪಿಯ ಪರಿಚಯ ಇದೆ. ಆರೋಪಿಯ ಹೆಸರು ಶೇಶಗಿರಿ. ಆರೋಪಿ ಪಂಚಾಯತಿ ಅಧ್ಯಕ್ಷ ಆಗಿರುವುದು ನನಗೆ ಗೊತ್ತಿಲ್ಲ. 2001-02 ನೇ ಸಾಲಿನಲ್ಲಿ ಸರ್ಕಾರ ಸ್ವಚ್ಛ ಗ್ರಾಮ ಯೋಜನೆ ಅಡಿಯಲ್ಲಿ ಖಾನಗೋಡು ಗ್ರಾಮ ಪಂಚಾಯತಿಗೆ ರೂ.20,00,000/- ಮಂಜೂರು ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಅದರಲ್ಲಿ ಫಲಾನುಭವಿಯಾಗಿ ಆಯ್ಕೆ ಆಗಿದ್ದೆ ಎಂದರೆ ಸರಿಯಲ್ಲ. ನನಗೆ ಸಹಾಯಧನ ರೂ.3000/- ಕೊಡಬೇಕಾಗಿತ್ತು ಎಂದರೆ ಗೊತ್ತಿಲ್ಲ. ನನಗೆ ಸಹಾಯಧನ ರೂ.3000/- ಕೊಟ್ಟಿಲ್ಲ. ನನ್ನನ್ನು ಪೊಲೀಸ ನವರು ವಿಚಾರಣೆ ಮಾಡಿದ್ದಾರೆ. ಆದರೆ ಸಹಾಯಧನ ರೂ.3000/- ಬಗ್ಗೆ ನನಗೆ ವಿಚಾರಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. ನಾನು ಪೊಲೀಸನವರಿಗೆ ನಮ್ಮ ಗ್ರಾಮ ಪಂಚಾಯತಿಗೆ ರೂ.20,00,000/- ಮಂಜೂರಿಗಿತ್ತು ಮತ್ತು ನಾನು ಫಲಾನುಭವಿಯಾಗಿ ಆಯ್ಕೆ ಆಗಿದ್ದೆ ಮತ್ತು ನನಗೆ ರೂ.3000/- ಸಹಾಯಧನ ಪಾವತಿ ಮಾಡಿಲ್ಲ ಎಂದು ಹೇಳಿಕೆಂದನ್ನು ನಿಪಿ-60 ರ ಪ್ರಕಾರ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯನಾಗಿದ್ದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ**

**ಆರೋಪಿಪರ ವಕೀಲರು ಜಿ ಟಿ ಎನ್ ರವರು ಹಾಜರು ಇಲ್ಲ ಅವರ ಸಹ್ಯೋದ್ಯೋಗಿ ಹೆಚ್ ಎಮ್ ಜಿ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿದ್ದಾರೆ ಅದರೆ ಅವರು ವಕಾಲತ್ ನಾಮಾ ಹಾಕಿಲ್ಲ. ನಂತರ ಆರೋಪಿ ಖುದ್ದು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳಿದ್ದಾರೆ.**

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ